## ಅಯ್ಯರ್ ಅಜ್ಞಾತವಾಸ!

ಚಿತ್ರದುರ್ಗದ ಬೆಟ್ಟದ ಮೇಲಿನ ಗುಡಿಯ ದ್ವಾರದಲ್ಲಿ ಅಸ್ಪಷ್ಟ ಬಣ್ಣಗಳ ಮೇಳದಲ್ಲಿ 'ಹಂಸಗೀತೆ' ಚಿತ್ರ ಬಿಚ್ಚಿಕೊಳ್ಳುತ್ತದೆ. ಮದಕರಿನಾಯಕನ ಮುಖ ಅದರಲ್ಲಿ ಆವಿರ್ಭಾವವಾಗುತ್ತದೆ. ಚರಿತ್ರಾರ್ಹ ವ್ಯಕ್ತಿ ಇದ್ದದ್ದು ನಿಜವೆಂದೇ ಆತ ಸ್ಪಷ್ಟವಾಗಿ ಕಾಣುತ್ತಾನೆ. ಮದಕರಿನಾಯಕನ ನೋಟದಲ್ಲಿಯೇ ವೆಂಕಣ್ಣ ಹುಟ್ಟಿಕೊಳ್ಳುತ್ತಾನೆ. ಎಂಥ ಅಪರೂಪದ ಕಥನಶೈಲಿ ಎನ್ನಿಸುತ್ತದೆ. "ತಮ್ಮ ಕಾಲದ ಎಲ್ಲ ಹೊಸ ಸುಧಾರಣೆಗಳನ್ನು ಮುರಿಯುವ ಸಾಹಸ ಮಾಡಿದವರು ಅಯ್ಯರ್. ಅವರು ಈ ಬೇಲಿಯನ್ನು ದಾಟಿದಾಗ ರೂಪುಗೊಂಡದ್ದೇ 'ಚೌಕದ ದೀಪ'. ಆದರೆ ಪ್ರೇಕ್ಷಕರು ಅಂಥ ಚಿತ್ರವನ್ನು ಸ್ವೀಕರಿಸುವ ಮಟ್ಟಕ್ಕೆ ಇನ್ನೂ ಮುಟ್ಟಿರಲಿಲ್ಲ. ಪ್ರೇಕ್ಷಕರಿಗೆ ಆಘಾತವಾಯಿತು. ಚಿತ್ರ ಸೋತಿತು. ಎಲ್ಲೆಡೆಯಿಂದಲೂ ಟೀಕೆಗಳ ಸುರಿಮಳೆ. ಆಯ್ಯರ್ ಸೋತು ಸತ್ತುಹೋದ ಎಂದರು ಜನ" ಎಂದು ಅಯ್ಯರ್ ಬಗೆಗಿನ ತಮ್ಮ ಪುಸ್ತಕದಲ್ಲಿ ಬನ್ನಂಜೆ ಗೋವಿಂದಾಚಾರ್ಯ ದಾಖಲಿಸುತ್ತಾರೆ. ಆದರೆ, ಅಯ್ಯರ್ ಈ ಆಘಾತದಿಂದ ಚೇತರಿಸಿಕೊಂಡು ಮತ್ತೆ ಕ್ರಿಯಾಶೀಲರಾಗಲು ಬಹಳಷ್ಟು ಕಾಲ ಅಜ್ಞಾತವಾಸವನ್ನು ಅನುಭವಿಸ ಬೇಕಾಯಿತು. ಈ ವೇಳೆಯಲ್ಲಿ ಅವರು ಜಗತ್ತಿನ ಖ್ಯಾತ ನಿರ್ದೇಶಕರ ಚಿತ್ರಗಳನ್ನು ನೋಡಿ, ನೂರಾರು ಪುಸ್ತಕಗಳನ್ನು ಓದಿ ದೃಶ್ಯ ಮಾಧ್ಯಮದ ವ್ಯಾಕರಣವನ್ನು ಮೈಗೂಡಿಸಿಕೊಂಡರು. ಅವರ 'ಹಂಸಗೀತೆ'ಯಲ್ಲಿ ಇಂಗ್ಮಾರ್ ಬರ್ಗ್‌ಮನ್ (ವೈಲ್ಡ್ ಸ್ಟ್ರಾಬೆರೀಸ್) ಚಿತ್ರಗಳ ಪ್ರಭಾವ ಹಾಗೂ ಜಾನ್ ಫೋರ್ಡ್ ಚಿತ್ರಗಳ (ಹೌ ಗ್ರೀನ್ ವಾಸ್ ಮೈ ವ್ಯಾಲಿ) ಪ್ರಭಾವವಿರುವುದನ್ನು ಕಾಣಬಹುದು.

ಇದೆಲ್ಲ ಇರಲಿ. "ನನ್ನ ಅಂತರಾಳದಲ್ಲಿ ಕಾದಂಬರಿಯಲ್ಲಿ ತುಣುಕು ತುಣುಕಾಗಿ ಬಂದಿರುವ ಕಥೆಯನ್ನು ಒಂದು ಸರಮಾಲೆಯನ್ನಾಗಿ ಮಾಡಿದ್ದೇನೆ. ಸಾಂಕೇತಿಕವಾಗಿ ಶಬ್ದಗಳನ್ನೂ ಪ್ರತಿಮೆಗಳನ್ನಾಗಿ, ದೃಶ್ಯಗಳನ್ನಾಗಿ ಬಳಸಿಕೊಂಡಿದ್ದೇನೆ. ಪ್ರತಿಮೆಗಳ ಸರಮಾಲೆಯನ್ನೇ ಪೋಣಿಸಿ ವೆಂಕಣ್ಣ ಭೈರವಿಯ ಹಾಡಿ ತನ್ನ ನಾಲಿಗೆ ಕತ್ತರಿಸಿಕೊಳ್ಳುತ್ತಾನೆ. ದೀಪಸ್ತಂಭದ ಬೆಳಕು ಉರಿಯಾಗುತ್ತದೆ. ತಟ್ಟೆಯೊಳಗೆ ಬೋರಲು ಬಿದ್ದ ಪಂಚಪಾತ್ರೆ. ಕಂಬಕ್ಕೆ ಸುತ್ತಿದ ಒಣಗಿದ ಮಾವಿನೆಲೆ. ಒಡೆದ ತೆಂಗಿನಕಾಯಿ ಮುಂತಾದವುಗಳನ್ನು ವೆಂಕಣ್ಣ ಭಗವತಿಯ ಸಾನ್ನಿಧ್ಯ ಸೇರುವವರೆಗೆ ತೋರಿಸಿದ್ದೇನೆ. ಥಟ್ಟನೆ ಹಾಡು ನಿಂತು ದೇವರ ಮುಂದೆಯೇ ಹಾಡು ಕೊನೆಯಾಗುವುದನ್ನು ಪ್ರತಿಪಾದಿಸಿದ್ದೇನೆ. ಚಿತ್ರದ ಕೊನೆಯ ದೃಶ್ಯದಲ್ಲಿ ಟಿಪ್ಪುವನ್ನು ಚಾರಿತ್ರಿಕ ವ್ಯಕ್ತಿಯಾಗೇ ತೋರಿಸಿದ್ದೇನಾದರೂ, ಕಥೆಯ ವೆಂಕಣ್ಣನ ಮಾತುಗಳು ಮುಗಿಯುವುದು ಸಾಂಬ್ರಾಣಿಯ ಹೊಗೆಯ ಮುಸುಕಿನಲ್ಲಿ. ಅಸ್ಪಷ್ಟತೆಯೇ ಈ ಕಥೆಯಲ್ಲಿ ಉಳಿದಿದ್ದರೂ, ಸುಗಂಧಯುಕ್ತವಾದದ್ದೆಂದು ಪ್ರತಿಪಾದಿಸಿದ್ದೇನೆ. ಹಿಂದುಮುಂದಾಗಿ ಬರುವ ಕಥೆ ಎಲ್ಲ ವೆಂಕಟಸುಬ್ಬಯ್ಯನವರದಾಗದೆ, ತ.ರಾ.ಸು. ಅವರ ಕಥೆ ಹುಡುಕುವ ಕಥೆಯಾಗಿ ಹೋಗುತ್ತದೆಯೇ? ಎಂದು ಹೆದರಿದ್ದೆ. ನಾನು ಹಾಗೆ ಹೆದರದೆ ಕಾದಂಬರಿಯಂತೆಯೇ ಚಿತ್ರ ತೆಗೆದಿದ್ದರೆ ತ.ರಾ.ಸು. ಅವರೇ ನನಗೆ ನಾಯಕನಾಗಬೇಕಿತ್ತು. ಹಣ ಸಿಕ್ಕರೆ ಹಾಗೆ ಇನ್ನೊಂದು ಬಾರಿ ಇದೇ ಚಿತ್ರವನ್ನು ತೆಗೆಯಬೇಕೆಂಬ ಆಸೆಯೂ ಇದೆ" ಎಂದು ಅಯ್ಯರ್ ಹೇಳುತ್ತಿದ್ದುದು ಈಗಲೂ ನೆನಪಾಗುತ್ತದೆ.

ಕಾದಂಬರಿಯನ್ನು ಸಂಪೂರ್ಣವಾಗಿ ಆಧರಿಸಿ, ಈಗಲೂ ಚಿತ್ರ ಮಾಡಿದರೆ, ಇನ್ನಷ್ಟು ಈ ಸೂಕ್ಷ್ಮಗಳು, ಆ ಕಾಲದ ನಂಬಿಕೆ, ಮೌಲ್ಯಗಳು, ಭಕ್ತಿಪಂಥದ ಹಲವು ಮಜಲುಗಳನ್ನು ತೋರಿಸಬಹುದೇನೋ ಎನ್ನುವುದು ನನ್ನ ಅನಿಸಿಕೆ. ಕಾರಣ ಇಷ್ಟೆ. ತ.ರಾ.ಸು ಅವರ ಕಾದಂಬರಿಯಲ್ಲಿರುವ ಕಥಾನಕ ದೃಶ್ಯಮಾಧ್ಯಮಕ್ಕೆ ಹೇಳಿಮಾಡಿಸಿದಂತೆ ಇದೆ. ಅದನ್ನು ಓದುತ್ತಿದ್ದಂತೆ ಈಗಲೂ ದೃಶ್ಯಗಳು ಸಾಲುಸಾಲಾಗಿ ಕಣ್ಣಮುಂದೆ ಮೂಡಿಬರುತ್ತದೆ.

ಕಾದಂಬರಿಯ ಭಾಗವೊಂದು Flowers ನಾಟಕವಾದ ಕಥೆ. ಕಥೆಗಾರನ ಹುಡುಕಾಟದಲ್ಲಿ ಲಿಂಗಾಜೋಯಿಸರು ಹೇಳುವ ಕಥೆಯಲ್ಲಿ, ಲಿಂಗಾ ಜೋಯಿಸರು ತೋರಿಸುವ ವೆಂಕಟಸುಬ್ಬಯ್ಯನವರ ಕಲ್ಲು, ಕಕ್ಷಿದಾರನ ಕಡತದಲ್ಲಿನ ದಾನಪತ್ರದ ಪ್ರಸ್ತಾಪವಿದೆ. ಅಲ್ಲಿ ಹುಟ್ಟುವ ಮಲ್ಲಿಗೆ ಹೂವಿನ ಕಥೆ, ಭಕ್ತಿಯ ಪರಾಕಾಷ್ಠೆ, ಅರ್ಚಕ ವೀರಣ್ಣಜ್ಜ, ಆತ್ಮಾಹುತಿ ಮಾಡಿಕೊಳ್ಳುವ ಅರ್ಚಕ, ಅವನ ನೆರವಿಗೆ ಸಂಗೀತ ಆರಾಧನೆ ಮಾಡುವ ವೆಂಕಟಸುಬ್ಬಯ್ಯ